ಅವಕಾಶ ಇದೆ. ಹಾಗೆಯೇ, ನಬಾರ್ಡ್ ಯೋಜನೆಗಳಲ್ಲಿಯೂ ಕೂಡ ಈ ಭಾಗದ ರಸ್ತೆಗಳನ್ನು ತೆಗೆದುಕೊಳ್ಳಬೇಕು. ಈ ಭಾಗದಲ್ಲಿ ಹೆಚ್ಚು ಹೆಚ್ಚು ಮಳೆಯಾಗುವ ಕಾರಣದಿಂದ ರಸ್ತೆಗಳು ಹಾಳಾಗುತ್ತಿವೆ. ಈ ಕಾರಣದಿಂದ ಇಲ್ಲಿನ ರಸ್ತೆಗಳಿಗೆ ಹೆಚ್ಚು ಹಣವನ್ನು ಕೊಟ್ಟು ಈ ಭಾಗದ ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕೆಂಬುದು ಸರ್ಕಾರದ ಮುಂದಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಆ ಭಾಗದಲ್ಲಿ ಎಷ್ಟು ಮಳೆಯಾಗುತ್ತದೆಂದು ಮಾನ್ಯ ಸಚಿವರೂ ಕೂಡ ಒಪ್ಪಿಕೊಂಡಿದ್ದಾರೆ. ಕನಿಷ್ಠ 100"ನಿಂದ 420" ನವರೆಗೆ ಅಲ್ಲಿ ಮಳೆಯಾಗುತ್ತದೆ. ಮಲೆನಾಡಿನಲ್ಲಿ ಒಂದು ಕಿ. ಮೀ ರಸ್ತೆಯನ್ನು ಮಾಡುವುದಕ್ಕೆ ಫಾರ್ಮೆಷನ್‌ನಿಂದ ಇಡಿದು ಡಾಂಬರ್ ಹಾಕುವುದಕ್ಕೆ ಕನಿಷ್ಠ 20 ರಿಂದ 25 ಲಕ್ಷ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ತಾವು ಈಗ ಏನು ಪ್ರಕಟಣೆ ಮಾಡಿದ್ದೀರಿ ಅದರ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಎಲ್ಲಾ ಕ್ಷೇತ್ರಗಳಿಗೆ ಕೊಟ್ಟಂತೆ ಇಲ್ಲಿಗೂ ಹಣ ಕೊಟ್ಟರೆ ಏನೇನು ಸಾಕಾಗುವುದಿಲ್ಲ. ನನ್ನ ಕ್ಷೇತ್ರವಾದ ಸಕಲೇಶಪುರ ತಾಲ್ಲೂಕಿಗೆ ಮತ್ತು ಮಲೆನಾಡು ಭಾಗಗಳ ಕ್ಷೇತ್ರಗಳಿಗೆ ವಿಶೇಷವಾದಂಥ ಅನುದಾನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ಶೋಭಾ ಕರಂದ್ಲಾಜೆ:– ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಪರಿಶೀಲನೆ ಎಂಬ ಪದವನ್ನು ಅವರು ಕೇಳಿ ಕೇಳಿ ಪರಿಶೀಲನೆ ಮಾಡುತ್ತೇನೆಂಬುದು ಅವರಿಗೂ ಕೂಡ ಅಭ್ಯಾಸವಾಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಅವರು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ಇಲ್ಲಿನ ಚರ್ಚೆ ಬಗ್ಗೆ ಅವರು ಕೇಳಿದ್ದಾರೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ:– ಮಾನ್ಯ ಸಚಿವರು ತಲೆ ತೂಗಿಸಿದರೆ ನಾವು ಏನೆಂದು ತಿಳಿದುಕೊಳ್ಳಬೇಕು. ಮಾಡುತ್ತಾರೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂಬುದು ನಮಗೆ ಗೊತ್ತಾಗಬೇಕು.

ರಾಜ್ಯದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಎಲ್ಲಾ ವಿದ್ಯುತ್ ಸ್ಥಾವರಗಳು

30(98) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್).– ಮಾನ್ಯ ಇಂಧನ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯಕ್ಕೆ ಪ್ರತಿ ದಿನ ಅಗತ್ಯವಿರುವ ವಿದ್ಯುತ್ತಿನ ಪ್ರಮಾಣವೆಷ್ಟು?

(ಆ) ರಾಜ್ಯದಲ್ಲಿ ಉತ್ಪಾದನೆ ಆಗುತ್ತಿರುವ ವಿದ್ಯುತ್ತಿನ ಪ್ರಮಾಣವೆಷ್ಟು; ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ವಿದ್ಯುತ್ತಿನ ಉತ್ಪಾದನೆಯಾಗುತ್ತಿದೆ;

(ಇ) ರಾಜ್ಯವು ಎದುರಿಸುತ್ತಿರುವ ವಿದ್ಯುತ್ತಿನ ಕೊರತೆ ಎಷ್ಟು; ಈ ಕೊರತೆಯನ್ನು ಸರಿದೂಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು:

(ಈ) ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ವಿದ್ಯುತ್ ಉತ್ಪಾದನೆಗೆ ಸಹಕಾರಿಯಾಗುವ ಉಷ್ಣ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲಾಗುತ್ತಿದೆ;

(ಉ) ಈ ದಿಸೆಯಲ್ಲಿ ಯಾವ ಯಾವ ಪ್ರಕ್ರಿಯೆಗಳು ನಡೆದಿವೆ; ಇದಕ್ಕೆ ತಗಲುವ ವೆಚ್ಚವೆಷ್ಟು;

(ಊ) ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ; (ಪೂರ್ಣ ವಿವರಗಳನ್ನು ಒದಗಿಸುವುದು)

(ಋ) ಈ ಸ್ಥಾವರಗಳ ಸ್ಥಾಪನೆಗೆ ಟೆಂಡರ್ ಕರೆಯಲಾಗಿದೆಯೇ; ಭಾಗವಹಿಸಿದವರ ವಿವರಗಳನ್ನು ನೀಡುವುದು;

(ಋಾ) ಈ ಸ್ಥಾವರಗಳ ಸ್ಥಾಪನೆಯನ್ನು ಎಷ್ಟು ದಿನದಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು):–

(ಅ) ಪ್ರಸಕ್ತ ವರ್ಷವಾದ 2008–09ರಲ್ಲಿ ರಾಜ್ಯಕ್ಕೆ ದಿನವಹಿ ಅಗತ್ಯವಿರುವ ಅನಿರ್ಬಂಧಿತ ವಿದ್ಯುತ್ ಬೇಡಿಕೆಯು ಸರಾಸರಿ ಸುಮಾರು 128 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದೆ.

(ಆ) ಪ್ರಸಕ್ತ ರಾಜ್ಯದ ದಿನವಹಿ ಆಂತರಿಕ ವಿದ್ಯುತ್ ಉತ್ಪಾದನೆ 65 ದಶಲಕ್ಷ ಯೂನಿಟ್ಟುಗಳು ಅಲ್ಲದೇ, ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಸ್ಥಾವರಗಳಿಂದ ರಾಜ್ಯಕ್ಕೆ ದಿನವಹಿ ಲಭ್ಯವಾಗುತ್ತಿರುವ ವಿದ್ಯುತ್ತಿನ ಪ್ರಮಾಣ 35 ದಶಲಕ್ಷ ಯೂನಿಟ್ಟುಗಳು.

ಪ್ರಸಕ್ತ ಉತ್ಪಾದನೆಯಾಗುತ್ತಿರುವ ಮತ್ತು ಲಭ್ಯವಾಗುತ್ತಿರುವ ವಿದ್ಯುತ್ತಿನ ಮೂಲಗಳ ವಿವರಗಳು ಈ ಕೆಳಕಂಡಂತಿದೆ;

ಕ್ರ.ಸಂ.	ಸಂಸ್ಥೆ / ವಿದ್ಯುತ್ ಉತ್ಪಾದನಾ ಕೇಂದ್ರಗಳ ವಿವರಗಳು	ಪ್ರತಿ ದಿನ ಉತ್ಪಾದಿಸಲಾಗುತ್ತಿರುವ/ ಪಡೆಯಲಾಗುತ್ತಿರುವ ವಿದ್ಯುತ್ತಿನ ಪ್ರಮಾಣ (ದಶಲಕ್ಷ ಯೂನಿಟ್ಟುಗಳಲ್ಲಿ)
1	ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕವಿನಿನಿ) ಜಲ ವಿದ್ಯುತ್ ಕೇಂದ್ರಗಳು	25
2	ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕವನಿನಿ) ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳು	20
3	ಖಾಸಗಿ ವಲಯದ ಬೃಹತ್ ಸ್ವತಂತ್ರ ವಿದ್ಯುತ್ ಉತ್ಪಾದಕರು	2
4	ಖಾಸಗಿ ವಲಯದಲ್ಲಿ ಅಸಂಪ್ರದಾಯಕ ಇಂಧನ ಮೂಲಗಳಿಂದ	10
5	ಪವನ ವಿದ್ಯುತ್ ಸ್ಥಾವರ	6
6	ಯಲಹಂಕ ಡಿ.ಜಿ. ಸ್ಥಾವರ	2
7	ಕೇಂದ್ರ ಸರ್ಕಾರ ಸ್ವಾಮ್ಯದ ಶಾಖೋತ್ಪನ್ನ ವಿದ್ಯುತ್ ಸ್ಥಾವರ	35
	ಒಟ್ಟು	**100**

(ಇ) ಪ್ರಸಕ್ತ ವರ್ಷದಲ್ಲಿ (2008–09) ಮುಂಗಾರಿನ ವಿಫಲತೆಯಿಂದ ರಾಜ್ಯದ ಪ್ರಮುಖ ಜಲ ವಿದ್ಯುತ್ ಜಲಾಶಯಗಳಲ್ಲಿ ನೀರಿನ ಮಟ್ಟವು ತೃಪ್ತಿಕರವಾಗಿಲ್ಲದಿರುವ ಹಿನ್ನೆಲೆಯಲ್ಲಿ ಜಲ ವಿದ್ಯುತ್ ಲಭ್ಯತೆ ಕುಂಠಿತಗೊಳ್ಳುತ್ತಿರುವುದರಿಂದ, ರಾಜ್ಯವು ಈ ವರ್ಷದಲ್ಲಿ ದಿನವಹಿ ಸರಾಸರಿ ಸುಮಾರು 26 ದಶಲಕ್ಷ ಯೂನಿಟ್ಟುಗಳ ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದೆ.

ವಿದ್ಯುತ್ ಬೇಡಿಕೆ ಮತ್ತು ಲಭ್ಯತೆ ನಡುವೆ ಇರುವ ಅಂತರವನ್ನು ಸ್ವಲ್ಪಮಟ್ಟಿಗೆ ಕಡಿಮೆಗೊಳಿಸುವ ನಿಟ್ಟಿನಲ್ಲಿ ಈ ಕೆಳಕಂಡ ತುರ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಅಕ್ಟೋಬರ್ 2008 ರಿಂದ ಜನವರಿ 2009 ರವರೆಗಿನ ಅವಧಿಯಲ್ಲಿ ಕನಿಷ್ಠ 100 ಮೆ.ವ್ಯಾಟ್‌ನಿಂದ ಗರಿಷ್ಠ700 ಮೆ.ವ್ಯಾಟ್‌ಗಳ ಮಿತಿಗೆ ಒಳಪಟ್ಟು ವಿದ್ಯುತ್ತನ್ನು ಖಚಿತ / ಒಂದು ದಿನ ಮುಂಚಿತ (ಡೇ ಅಹೆಡ್) ಆಧಾರಿತ ರೀತಿಯಲ್ಲಿ ಪಡೆಯಲು ಬಿಡ್ಡುಗಳನ್ನು ಆಹ್ವಾನಿಸಲಾಗಿರುತ್ತದೆ.

2. ದಿನ ನಿತ್ಯ ವಿದ್ಯುತ್ ಬೇಡಿಕೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸಲು "ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್" ಮೂಲಕ ವಿದ್ಯುತ್ತನ್ನು ಖರೀದಿಸಲಾಗುತ್ತದೆ.

3. ಲಭ್ಯತೆ ಆದಾರಿತ ದರದ ಪ್ರಕಾರ ಅನುಕೂಲಕರ ಜಾಲ ತರಂಗವಿದ್ದಾಗ ಕೇಂದ್ರ ವಿದ್ಯುತ್ ಉತ್ಪಾದನಾ ಘಟಕಗಳಿಂದ ಹೆಚ್ಚುವರಿ ವಿದ್ಯುತ್ತನ್ನು ಪಡೆಯಲಾಗುತ್ತಿದೆ.

4. ಜಲಾಶಯಗಳಲ್ಲಿ ನೀರಿನ ಪ್ರಮಾಣವನ್ನು ಹೆಚ್ಚಿಸಲು ಮೋಡ ಬಿತ್ತನೆ ಕಾರ್ಯದ ಅನುಷ್ಠಾನವನ್ನು ಶೀಘ್ರದಲ್ಲಿ ಪ್ರಾರಂಭಿಸಲು ಯೋಜಿಸಲಾಗಿದ್ದು, ಈ ಕಾರ್ಯವನ್ನು ಜಲಸಂಪನ್ಮೂಲ ಇಲಾಖೆಗೆ ವಹಿಸಲಾಗಿದೆ.

ಧೀರ್ಘಕಾಲಿಕ ಕ್ರಮಗಳು :

1. ಎಲ್ಲಾ ವಿದ್ಯುತ್ ಕಂಪನಿಗಳ ಪರವಾಗಿ ಪವರ್ ಕಂಪನಿ ಆಫ್ ಕರ್ನಾಟಕ ಲಿ. ತಲಾ 1000 ರಿಂದ 1320 ಮೆ.ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಯೋಜನೆಗಳನ್ನು ಮೈಸೂರು ಜಿಲ್ಲೆಯ ಚಾಮಲಾಪುರದಲ್ಲಿ ಬೆಳಗಾವಿ ಜಿಲ್ಲೆಯ ಘಟಪ್ರಭಾದಲ್ಲಿ ಹಾಗೂ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿ ಸ್ಥಾಪಿಸಲು ಸ್ಪರ್ಧಾತ್ಮಕ ಬಿಡ್ಡು ಪ್ರಕ್ರಿಯೆಯನ್ನು ಆರಂಭಿಸಿರುತ್ತದೆ. ಈ ಯೋಜನೆಯನ್ನು ಖಾಸಗೀ ವಿದ್ಯುತ್ ಉತ್ಪಾದಕರಿಗೆ ಬಿಡ್ಡಿಂಗ್ ಪ್ರೊಸೆಸ್ ಮುಖಾಂತರ ಆವಾರ್ಡ್ ಮಾಡಲಾಗುವುದು.

2. ಧೀರ್ಘಕಾಲಿಕ ಕ್ರಮವಾಗಿ 2500 ಮೆ.ವ್ಯಾಟ್ ವಿದ್ಯುತ್ತನ್ನು ಟ್ಯಾರಿಫ್ ಆಧಾರಿತ ಸ್ಪರ್ಧಾತ್ಮಕ ಬಿಡ್ಡು ಮೂಲಕ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

3. ತಾಲ್ಲೂಕು ಮಟ್ಟದಲ್ಲಿ ಅಂದಾಜು ಪ್ರತಿ 5 ಮೆ.ವ್ಯಾ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಬಿಡ್ಡುಗಳನ್ನು ಆಹ್ವಾನಿಸಲಾಗಿದೆ.

(ಈ) 1. ಪವರ್ ಕಂಪನಿ ಆಫ್ ಕರ್ನಾಟಕ ಲಿ. ಈ ಕೆಳಕಂಡ ಸ್ಥಳಗಳಲ್ಲಿ 1000ರಿಂದ 1320 ಮೆ.ವ್ಯಾ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಬಿಡ್‌ನ್ನು ಆಹ್ವಾನಿಸಿರುತ್ತದೆ.

* ಚಾಮಲಾಪುರ – ಮೈಸೂರು ಜಿಲ್ಲೆ (ಸ್ಪರ್ಧಾತ್ಮಕ ಬಿಡ್ಡಿಂಗ್ ಮುಖಾಂತರ)

* ಘಟಪ್ರಭಾ – ಬೆಳಗಾಂ ಜಿಲ್ಲೆ (ಸ್ಪರ್ಧಾತ್ಮಕ ಬಿಡ್ಡಿಂಗ್ ಮುಖಾಂತರ)

* ಜೇವರ್ಗಿ – ಗುಲ್ಬರ್ಗಾ ಜಿಲ್ಲೆ (ಸ್ಪರ್ಧಾತ್ಮಕ ಬಿಡ್ಡಿಂಗ್ ಮುಖಾಂತರ)

2. ಬಿಜಾಪುರ ಜಿಲ್ಲೆಯ ಕುಡ್ಗಿ ಎಂಬಲ್ಲಿ ಮೆ: ಎನ್.ಟಿ.ಪಿ.ಸಿ. ಸಂಸ್ಥೆಯ ಜಂಟಿ ಸಹಭಾಗಿತ್ವದೊಂದಿಗೆ 2000 ಮೆ.ವ್ಯಾ ಸಾಮರ್ಥ್ಯದ ಯೋಜನೆ.

3. ಖಾಸಗಿ ಅಭಿವೃದ್ಧಿದಾರರ ಯೋಜನೆಗಳು

* ಮೆ: ಉಡುಪಿ ಪವರ್ ಕಾರ್ಪೋರೇಷನ್ ಲಿ. (ಹಿಂದಿನ ಎನ್.ಪಿ.ಸಿ.ಎಲ್)– 1015 ಮೆ.ವ್ಯಾಟ್ ಸಾಮರ್ಥ್ಯ.

* ಮೆ: ಹಾಸನ ಥರ್ಮಲ್ ಪವರ್ (ಪ್ರೈ) ಲಿ. (ಹೆ.ಟಿ.ಪಿ) – ಹಾಸನದಲ್ಲಿ 500 ಮೆ.ವ್ಯಾ ಸಾಮರ್ಥ್ಯ.

ಈ ಕೆಳಕಂಡ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಗುರುತಿಸಿರುತ್ತದೆ.

1) ಯರಮರಸ್ ಶಾ. ವಿ. ಕೇಂದ್ರ, ರಾಯಚೂರು ಜಿಲ್ಲೆ. (2 X 800 ಮೆ.ವ್ಯಾ)

2) ಯಾದ್ಗೀರ್ ಶಾ.ವಿ. ಕೇಂದ್ರ ಗುಲ್ಬರ್ಗಾ ಜಿಲ್ಲೆ (2 X 500 ಮೆ.ವ್ಯಾ)

3) ಅಣ್ಣೇಚಾಕನಹಳ್ಳಿ ಶಾ.ವಿ. ಕೇಂದ್ರ ಹಾಸನ ಜಿಲ್ಲೆ (3 X 500 ಮೆ.ವ್ಯಾ)

4) ಕಲ್ಲುರ್ಕಿ ಶಾ.ವಿ. ಕೇಂದ್ರ ಬಿಜಾಪುರ ಜಿಲ್ಲೆ. (3 X 500 ಮೆ.ವ್ಯಾ)

5) ಯದ್ದಾಪುರ ಶಾ.ವಿ. ಕೇಂದ್ರ ರಾಯಚೂರು ಜಿಲ್ಲೆ. (1 X 800 ಮೆ.ವ್ಯಾ)

6) ಬಳ್ಳಾರಿ ಶಾ.ವಿ. ಕೇಂದ್ರ 3ನೇ ಘಟಕ ಬಳ್ಳಾರಿ ಜಿಲ್ಲೆ (1 X 500 ಮೆ.ವ್ಯಾ)

7) ಕುಡುತಿನಿ ಶಾ.ವಿ. ಕೇಂದ್ರ ಬಳ್ಳಾರಿ ಜಿಲ್ಲೆ (3 X 500 ಮೆ.ವ್ಯಾ)

(ಉ) ಈ ಮೇಲಿನ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರಗಳ ಸ್ಥಾಪನೆಗೆ ಸಂಬಂಧಿಸಿದಂತೆ ವಸ್ತುಸ್ಥಿತಿಗಳು ಈ ಕೆಳಕಂಡಂತಿವೆ.

1. ಸ್ಪರ್ಧಾತ್ಮಕ ಬಿಡ್ಡುಗಳ ಮೂಲಕ ಮೈಸೂರು ಜಿಲ್ಲೆಯ ಚಾಮಲಾಪುರ, ಬೆಳಗಾವಿ ಜಿಲ್ಲೆಯ ಘಟಪ್ರಭಾ ಮತ್ತು ಗುಲಬರ್ಗಾ ಜಿಲ್ಲೆಯ ಜೇವರ್ಗಿಗಳಲ್ಲಿ ತಲಾ ಒಂದು ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಖಾಸಗಿ ವಿದ್ಯುತ್ ಉತ್ಪಾದಕರಿಂದ ಸ್ಪರ್ಧಾತ್ಮಕ ಬಿಡ್ಡುಗಳ ಮೂಲಕ ಸ್ಥಾಪಿಸಲು ಈಗಾಗಲೇ ಟೆಂಡರ್ ಗಳನ್ನು ಆಹ್ವಾನಿಸಲಾಗಿದ್ದು, 'ಅರ್ಹತೆಗಳ ಸಮ್ಮತವನ್ನು ವ್ಯಕ್ತಪಡಿಸುವಿಕೆ' (RFO) ಹಂತದಲ್ಲಿ ಅರ್ಹತೆ ಪಡೆದಿರುವ ವಿದ್ಯುತ್ ಅಭಿವೃದ್ಧಿದಾರರಿಗೆ ಬಿಡ್ಡಿಂಗ್ ದಾಸ್ತಾವೇಜುಗಳನ್ನು ಒದಗಿಸಲಾಗಿದೆ.

2. ಎನ್.ಟಿ.ಪಿ.ಸಿ. ಯೊಂದಿಗೆ ಜಂಟಿ ಸಹಭಾಗಿತ್ವದಲ್ಲಿ ಯೋಜನೆಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದ್ದು ಇದು ಇನ್ನು ಪ್ರಾರಂಭಿಕ ಹಂತದಲ್ಲಿದೆ.

3. ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯು ಸ್ಥಾಪಿಸುತ್ತಿರುವ 1015 ಮೆ.ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರದ ಕಾಮಗಾರಿಯು ಪ್ರಗತಿಯಲ್ಲಿದೆ.

4. ಹಾಸನ ಥರ್ಮಲ್ ಪವರ್ (ಪ್ರೈ. ಲಿ. ಸಂಸ್ಥೆಯು ಹಾಸನದಲ್ಲಿ ಸ್ಥಾಪಿಸುತ್ತಿರುವ 500 ಮೆ.ವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಯೋಜನೆಯು ಪ್ರಾರಂಭದ ಹಂತದಲ್ಲಿದೆ.

ಮೈಸೂರು ಜಿಲ್ಲೆಯ ಚಾಮರಾಜನಗರ, ಬೆಳಗಾವಿ ಜಿಲ್ಲೆಯ ಘಟಪ್ರಭಾ, ಗುಲಬರ್ಗಾ ಜಿಲ್ಲೆಯ ಜೇವರ್ಗಿ, ಬಿಜಾಪುರ ಜಿಲ್ಲೆಯ ಕುಡ್ಗಿ ಹಾಗೂ ಹಾಸನಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಯೋಜನೆಗಳು ಇನ್ನೂ ಪ್ರಾರಂಭಿಕ ಹಂತದಲ್ಲಿರುವುದರಿಂದ ಇವುಗಳ ಯೋಜನಾ ವೆಚ್ಚವು ನಿಖರವಾಗಿ ತಿಳಿಸು ಬಂದಿರುವುದಿಲ್ಲ. ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ರವರು ಯೋಜನಾ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿದೆ ಎಂದು ತಿಳಿಸಿರುತ್ತಾರೆ. ರೂ. 4299.12 ಕೋಟಿ ಯೋಜನಾ ವೆಚ್ಚಕ್ಕೆ ಸಿ.ಇ. ಆರ್.ಸಿ. ಯು ತಾತ್ವಿಕ ಅನುಮೋದನೆ ನೀಡಿರುತ್ತದೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯೋಜನೆಗಳ ವಿಸ್ತೃತ ಯೋಜನಾ ವರದಿಯ ತಯಾರಿಕೆಯು ಪೂರ್ಣಗೊಂಡಿದ್ದು ಅವುಗಳ ಪರಿಶೀಲನಾ ಕಾರ್ಯವು ಪ್ರಗತಿಯಲ್ಲಿದೆ. ಯೋಜಿತ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳ ಒಟ್ಟು ಅಂದಾಜು ವೆಚ್ಚವು ರೂ 41875 ಕೋಟಿಗಳಾಗಿರುತ್ತದೆ.

(ಊ) ಖಾಸಗೀ ವಲಯದಲ್ಲಿ ಸ್ಥಾಪನೆಗೊಳ್ಳುವ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳಿಗೆ ರಾಜ್ಯ ಸರ್ಕಾರದ ಧನ ಸಹಾಯ ಇರುವುದಿಲ್ಲ. ಕೇಂದ್ರ ಸರ್ಕಾರವು ರಾಜ್ಯದಲ್ಲಿ ಯಾವುದೇ ಉಷ್ಣ ವಿದ್ಯುತ್ ಸ್ಥಾವರ ನಿರ್ಮಾಣಕ್ಕೆ ಧನ ಸಹಾಯ ನೀಡಿರುವುದಿಲ್ಲ.

(ಋ) ಮೈಸೂರು ಜಿಲ್ಲೆಯ ಚಾಮಲಾಪುರ, ಬೆಳಗಾವಿ ಜಿಲ್ಲೆಯ ಘಟಪ್ರಭಾ ಹಾಗೂ ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಗಳ ಸ್ಥಾಪಿಸಲು ಉದ್ದೇಶಿಸಿರುವ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಯೋಜನೆಗಳ ಸ್ಥಾಪನೆಗೆ ಟೆಂಡರ್‌ಗಳನ್ನು ಅನುಕ್ರಮವಾಗಿ ದಿನಾಂಕ 8–8–2007, 18–08–2007 ಮತ್ತು 8–8–2007 ರಂದು ಕರೆಯಲಾಗಿದೆ. ಈ ಯೋಜನೆಗಳ ಸ್ಥಾಪನಗೆ " ಅರ್ಹತೆಗಳ ಸಮ್ಮತವನ್ನು ವ್ಯಕ್ತಪಡಿಸುವಿಕೆ (RFQ)" ದಸ್ತಾವೇಜುಗಳನ್ನು ಖರೀದಿಸಿರುವ ಬಿಡ್ದುದಾರರುಗಳ ಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಿದೆ.

ಯೋಜನೆಗೆ ಬೇಕಾಗುವ ಎಲ್ಲಾ ಒಪ್ಪಿಗೆಗಳು ದೊರೆತ ನಂತರ ಮೇಲ್ಕಂಡ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳ ನಿರ್ಮಾಣಕ್ಕಾಗಿ ಟೆಂಡರ್‌ಗಳನ್ನು ಕರೆಯಲಾಗುವುದು.

(ಋಾ) ಪಿ.ಸಿ.ಕೆ.ಎಲ್ (ಬಿಟ್ಟಿಂಗ್ ಮುಖಾಂತರ) ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಸ್ಥಾವರಗಳ ಕಾಮಗಾರಿಯನ್ನು ಪೂರ್ಣಗೊಳಿಸಲು ವಿದ್ಯುತ್ ಖರೀದಿ ಒಪ್ಪಂದವನ್ನು ಮಾಡಿಕೊಂಡಿರುವ ದಿನಾಂಕದಿಂದ 36 ರಿಂದ 39 ತಿಂಗಳುಗಳ ಕಾಲಮಿತಿ ಬೇಕಾಗಿರುತ್ತದೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಶಾಖೊತ್ಪನ್ನ ವಿದ್ಯುತ್ ಸ್ಥಾವರಗಳ ಪೈಕಿ ಬಳ್ಳಾರಿ ಶಾ. ವಿ. ಕೇಂದ್ರದ 3ನೇ ಘಟಕ, ಯರಮರಸ್ ಶಾ. ವಿ. ಕೇಂದ್ರ ಹಾಗೂ ಯದ್ದಾಪುರ ಶಾ.ವಿ. ಕೇಂದ್ರಗಳನ್ನು 11ನೇ ಪಂಚ ವಾರ್ಷಿಕ ಯೋಜನಾ ಅವಧಿಯಲ್ಲಿ ಕೈಗೆತ್ತಿಕೊಂಡು 12ನೇ ಪಂಚವಾರ್ಷಿಕ ಯೋಜನಾ ಅವಧಿಯ ಪ್ರಾರಂಭದಲ್ಲಿಯೇ ಪೂರ್ಣಗೊಳಿಸಿ ಉಳಿದ ಯೋಜನೆಗಳನ್ನು 12ನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು.

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 98 ಕ್ಕೆ ಅನುಬಂಧ:-

ಚಾಮಲಾಪುರ, ಘಟಪ್ರಭ ಮತ್ತು ಜೇವರ್ಗಿಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ತಾಪೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರಗಳ ಸ್ಥಾಪನೆಗೆ ಕರೆಯಲಾಗಿರುವ ಆರ್.ಎಫ್.ಕ್ಯೂ ಬಿಡ್‌ಗಳನ್ನು ಖರೀದಿಸಿರುವ ಬಿಡ್ಡುದಾರರುಗಳ ಪಟ್ಟಿ:-

ಕ್ರ ಸಂ.	ಚಾಮಲಾಪುರ	ಘಟಪ್ರಭ	ಜೇವರ್ಗಿ
1	ಗುಜರಾತ್ ಪಗುಥಾನ್ ಎನರ್ಜಿ ಕಾರ್ಪೊರೇಷನ್ ಲಿ.	ಜಿ.ಇ.ಆರ್. ವಾಸವಿ ಪವರ್ ಕಾರ್ಪೊರೇಷನ್ ಲಿ.	ಗುಜರಾತ್ ಪಗುಥಾನ್ ಎನರ್ಜಿ ಕಾರ್ಪೊರೇಷನ್ ಲಿ.
2	ಲ್ಯಾನ್ಕೋ ಇನ್‌ಫ್ರಾಟೆಕ್ ಲಿ.	ಎಸ್ಸಾರ್ ಪವರ್ ಲಿ.	ಮೆ: ರೇಣುಕಾ ಇನ್‌ಫ್ರಾ ಪ್ರಾಜೆಕ್ಟ್ಸ್ ದತಂಗ್ ಕನ್‌ಸೋರ್ಷಿಯಮ್
3	ಕೊನಸೀನ ಗ್ಯಾಸ್ ಪವರ್ ಲಿ.	ಲ್ಯಾನ್ಕೋ ಇನ್‌ಫ್ರಾ ಟೆಕ್ ಲಿ.	ಮೆ: ಚಂಬಲ್ ಇನ್‌ಫ್ರಾಸ್ಟ್ರಕ್ಚರ್ ವೆಂಚರ್ಸ್ ಲಿ.
4	ಮೆ: ಚಂಬಲ್ ಇನ್‌ಫ್ರಾಸ್ಟ್ರಕ್ಚರ್ ವೆಂಚರ್ಸ್ ಲಿ.	ಅಬನ್ ಆಫ್‌ಶೋರ್ ಲಿ.	ಜೆ.ಎಸ್.ಡಬ್ಲ್ಯೂ ಎನರ್ಜಿ ಲಿ.
5	ಜೆ.ಎಸ್.ಡಬ್ಲ್ಯೂ ಇನರ್ಜಿ ಲಿ.	ಮಾಧ್ವನಿ ಇಂಟರ್‌ನ್ಯಾಷನಲ್ ಎಸ್.ಎ (ಇನ್‌ಕಾರ್ಪೊರೇಟೆಡ್ ಇನ್ ಪನಾಮ)	ಸಿಇಎಸ್‌ಸಿ ಲಿ.
6	ಎಂಟೀ ಪವರ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ. ಲಿ.	ಎಲ್ ಅಂಡ್ ಟಿ ಪವರ್ ಡೆವೆಲಪ್‌ಮೆಂಟ್ ಲಿ.	ಕೆ.ಎಸ್.ಕೆ ಎಲೆಕ್ಟ್ರಿಸಿಟಿ ಫೈನಾನ್ಸಿಂಗ್ ಇಂಡಿಯಾ ಪ್ರೈ.ಲಿ.
7	ಸಿಇಎಸ್‌ಇ ಲಿ.	ಕೊನಸೀನ ಗ್ಯಾಸ್ ಪವರ್ ಲಿ.	ಟಾಟಾ ಪವರ್ ಕಂಪನಿ ಲಿ.
8	ಟಾಟಾ ಪವರ್ ಕಂಪನಿ ಲಿ.	ಶ್ರೀ ರೇಣುಕಾ ಇನ್‌ಫ್ರಾ ಪ್ರಾಜೆಕ್ಟ್ಸ್ ದತಂಗ್ ಕನ್‌ಸೋರ್ಷಿಯಮ್	ರಿಲೈಯನ್ಸ್ ಪವರ್ ಲಿ.
9	ರಿಲೈಯನ್ಸ್ ಪವರ್ ಲಿ.	ನವಯುಗ ಇಂಜಿನಿಯರಿಂಗ್ ಕಂ. ಲಿ.	ಎಸ್ಸಾರ್ ಪವರ್ ಲಿ.
10	ಎಸ್ಸಾರ್ ಪವರ್ ಲಿ.	ಮಧುಕೊನ್ ಪ್ರಾಜೆಕ್ಟ್ ಲಿ.	ಲ್ಯಾನ್ಕೋ ಇನ್‌ಫ್ರಾಟೆಕ್ ಲಿ.
11	ಎಲ್ ಅಂಡ್ ಟಿ ಪವರ್ ಡೆವೆಲಪ್‌ಮೆಂಟ್ ಲಿ.	ವೀಡಿಯೋಕಾನ್ ಇಂಡಸ್ಟ್ರೀಸ್ ಲಿ.	ಎಲ್ ಅಂಡ್ ಟಿ ಪವರ್ ಡೆವೆಲಪ್‌ಮೆಂಟ್ ಲಿ.
12	ಮಧುಕಾನ್ ಪ್ರಾಜೆಕ್ಟ್ ಲಿ.	ಜಿ.ಎಂ.ಆರ್ ಎನರ್ಜಿ ಲಿ.	ಮಧುಕೊನ್ ಪ್ರಾಜೆಕ್ಟ್ ಲಿ.
13	ವೀಡಿಯೋಕಾನ್ ಇಂಡಸ್ಟ್ರಿಯಲ್ ಲಿ.	ಕೆ.ಎಸ್.ಕೆ ಎಲೆಕ್ಟ್ರಿಸಿಟಿ ಫೈನಾನ್ಸಿಂಗ್ ಇಂಡಿಯಾ ಪ್ರೈ.ಲಿ.	ವೀಡಿಯೋಕಾನ್ ಇಂಡಸ್ಟ್ರಿಯಲ್ ಲಿ.
14	ಜಿ.ಎಂ.ಆರ್ ಎನರ್ಜಿ ಲಿ.	ಇಸೋಲಕ್ಸ್ ಮೆರಾಕೇಟರ್ ಎಂಕೋ ಕನ್‌ಸೋರ್ಷಿಯಮ್	ಮೆ: ಜಿ.ಎಂ.ಆರ್ ಎನರ್ಜಿ ಲಿ.
15	ಇಸೋಲಕ್ಸ್ ಮೆರಾಕೇಟರ್ ಎಂಕೋ ಕನ್‌ಸೋರ್ಷಿಯಮ್	ಗುಜರಾತ್ ಪಗುಥಾನ್ ಎನರ್ಜಿ ಕಾರ್ಪೊರೇಷನ್ ಲಿ.	ಎಇಎಸ್ ಇಂಡಿಯಾ ಪ್ರೈ ಲಿ.
16	ಎಇಎಸ್ ಇಂಡಿಯಾ ಪ್ರೈ ಲಿ.	ಎಇಎಸ್ ಇಂಡಿಯಾ ಪ್ರೈ ಲಿ.	ಡಿ.ಎಸ್. ಕನ್‌ಸ್ಟ್ರಕ್ಷನ್ಸ್ ಲಿ.
17	ಡಿ.ಎಸ್. ಕನ್‌ಸ್ಟ್ರಕ್ಷನ್ಸ್ ಲಿ.	ಆರ್.ಕೆ. ಪವರ್‌ಜೆನ್ ಪ್ರೈ. ಲಿ. (ಮುದಜಯ ಕಾರ್ಪೊರೇಷನ್ ಬಹೆಜ್‌ಡಿ ಲಿ. ಕನ್ಸೋರ್‌ಸಿಯಮ್)	ಸೆಂದ ಕಾರ್ಪೊರೇಷನ್ ಯೂಟಿಲಿಟೀಸ್ ಲಿ.
18	ಸೆಂದ ಕಾರ್ಪೊರೇಷನ್ ಯೂಟಿಲಿಟೀಸ್ ಲಿ.	ಕನ್‌ಸೋರ್ಷಿಯಮ್ ರೆಡ್ ಬೈ ಗಾಮ್ಮನ್ ಇನ್‌ಫ್ರಾಸ್ಟ್ರಕ್ಚರ್ ಪ್ರಾಜೆಕ್ಟ್ಸ್ ಲಿ.	ಸೋಮ ಎಂಟರ್‌ಪ್ರೈಸೆಸ್ ಲಿ.
19	ಸೋಮ ಎಂಟರ್‌ಪ್ರೈಸೆಸ್ ಲಿ.	ಮೆ: ಚಂಬಲ್ ಇನ್‌ಫ್ರಾಸ್ಟ್ರಕ್ಚರ್ ವೆಂಚರ್ಸ್ ಲಿ.	ಮೇತಾಸ್ ಇನ್‌ಫ್ರಾ ಲಿ.
20	ಮೇತಾಸ್ ಇನ್‌ಫ್ರಾ ಲಿ.	ಟಾಟಾ ಪವರ್ ಕಂಪನಿ ಲಿ.	ಪಟೇಲ್ ಇಂಜಿನಿಯರಿಂಗ್ ಲಿ.

21	జి.వి. ఇన్‌ఫ్రాస్ట్రక్చర్ (ఇండియా) ప్రై. లి.	డి.ఎస్. కన్‌స్ట్రక్షన్ లి.	మే : ఎంటీ పవర్ అండ్ ఇన్‌ఫ్రాస్ట్రక్చర్ ప్రై. లి.
22	డయనా ఎనర్జీ లి.	మేకాస్ ఇన్‌ఫ్రా లి.	డయనా ఎనర్జీ లి.
23	కన్‌సోర్షియమ్ లేడ్ బై గామ్మన్ ఇన్‌ఫ్రాస్ట్రక్చర్ ప్రాజెక్ట్స్ లి.	సూమ ఎంటర్‌ప్రైసెస్ లి.	కన్‌సోర్షియమ్ లేడ్ బై గామ్మన్ ఇన్‌ఫ్రాస్ట్రక్చర్ ప్రాజెక్ట్స్ లి.
24	ఎన్ టి పి సి లి.	జి.వి. ఇన్‌ఫ్రాస్ట్రక్చర్ (ఇండియా) ప్రై. లి.	సురానా కార్పొరేట్ లి.
25		ఇండ్-భారత్ పవర్ ఇన్‌ఫ్రా ప్రై.లి.	ఎన్ టి పి సి లి.
26		డయనా ఎనర్జీ లి.	
27		న్యూ ఎరా పవర్ కార్పొరేషన్ లి.	
28		ఎన్.టి.పి.సి. లి., ఎన్.టి.పి.సి. భవన్	
29		జి.ఎస్.డబ్లూ ఎనర్జీ లి.	
	24	29	25

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಗಂಟೆಗೆ ಒಂದು ಸಾರಿ ವಿದ್ಯುತ್ ಹೋಗುತ್ತಿದೆ. ಈ ವಿಷಯದ ಬಗ್ಗೆ ಮಾತನಾಡುವುದಕ್ಕೋಸ್ಕರ ನಾನು ಎದ್ದಾಗ ಏಕೋ ನನಗೆ ಅವಕಾಶ ಸಿಗಲಿಲ್ಲ.

ಅಧ್ಯಕ್ಷರು:– ಈಗ ನಿನಗೆ ಅವಕಾಶ ಸಿಕ್ಕಿದೆ ಹೇಳಿ. ನಿಮಗೆ ಅವಕಾಶ ಈಗ ಸಿಗುತ್ತದೆಂದು ಆಗಲೇ ನಿಮಗೆ ಅವಕಾಶ ಕೊಡಲಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮುಂದೆ ಕುಳಿತವರಿಗೂ ಕೂಡ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು:– ಹಿಂದಿನವರೆಗೂ ಕೂಡ ಅವಕಾಶ ಕೊಡಬೇಕಾಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮುಂದೆ ಕುಳಿತವರಿಗೆ ಅವಕಾಶ ಕೊಡುವುದಿಲ್ಲವೆಂದರೆ ಇದು ಬಹಳ ದೊಡ್ಡ ತಪ್ಪಾಗುತ್ತದೆ.

ಅಧ್ಯಕ್ಷರು:– ಆಯಿತು. ತಾವು ಏನು ಕೇಳಬೇಕೆಂದು ಇದ್ದಿರೋ ಅದನ್ನು ಈಗ ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಅಧ್ಯಕ್ಷರೆ, ಇಲ್ಲಿ ಗಂಟೆ ಗಂಟೆಗೆ ಕರೆಂಟ್ ಹೋಗುತ್ತಿದೆ. ಯಾವಾಗ ಹೋಗುತ್ತದೆ ಮತ್ತು ಯಾವಾಗ ಬರುತ್ತದೆಂದು ಗೊತ್ತಾಗುತ್ತಿಲ್ಲ. ಈಗ ಮನೆಗಳಲ್ಲಿ ಜನರೇಟರ್ ಹಾಕಿಕೊಳ್ಳದೆ ಬೇರೆ ಗತಿಯೇ ಇಲ್ಲ ಮತ್ತೆ ನನಗೆ ವಯಸ್ಸಾಗಿರುವುದರಿಂದ ಮಹಡಿ ಹತ್ತಿಕೊಂಡು ನನ್ನ ರೂಮ್‌ಗೆ ಹೋಗುವುದಕ್ಕೆ ಆಗುತ್ತಿಲ್ಲ. ಲಿಫ್ಟ್ ಹತ್ತಿದರೆ ಅದಕ್ಕೆ ಕರೆಂಟ್ ಇರುವುದಿಲ್ಲ. ನಮ್ಮ ಗತಿ ಏನಾಗಿದೆ ಎಂದರೆ, ಮಹಡಿಯಲ್ಲಿರುವ ನನ್ನ ಕೊಠಡಿಗೆ ಕೂಡಲೇ ಹೋಗುವುದಕ್ಕೆ ಆಗುತ್ತಿಲ್ಲ. ನನ್ನ ಕಷ್ಟ ದೇವರಿಗೆ ಗೊತ್ತಿದೆ. ಇಂಥ ಒಂದು ಪರಿಸ್ಥಿತಿಯನ್ನು ನಾನು ಅನುಭವಿಸುತ್ತಿದ್ದೇವೆ. ಒಂದು ಗಂಟೆಗೊಂದು ಸಾರಿ ವಿದ್ಯುತ್ ಹೋಗುತ್ತದೆ. ಇದು ಯಾವಾಗ ಹೋಗುತ್ತದೆ ಅಥವಾ ಯಾವಾಗ ಬರುತ್ತದೆಂಬುದು ಗೊತ್ತಾಗುತ್ತಿಲ್ಲ. ಆದ್ದರಿಂದ ಆ ದೇವರೇ ನಮ್ಮನ್ನು ಕಾಪಾಡಬೇಕು. ಈ ರೀತಿಯಾದರೆ, ಇವತ್ತಿನ ದಿವಸ ಕೈಗಾರಿಕೆಗಳು ಮತ್ತು ಜನರ ಗತಿ ಏನಾಗುತ್ತಿದೆ ಎಂಬುದನ್ನು ತಿಳಿದುಕೊಂಡು ಇದರ ಬಗ್ಗೆ ಒಂದು ನಿರ್ದಿಷ್ಟವಾದಂಥ ಘೋಷಣೆಯನ್ನು ತಾವು ಮಾಡಬೇಕು. ಅಂದರೆ, ಇಂಥಿಂಥ ಸಮಯದಲ್ಲಿ ವಿದ್ಯುತ್ ಇರುತ್ತದೆ. ಇಂಥಿಂಥ ಸಮಯದಲ್ಲಿ ವಿದ್ಯುತ್ ಬಂದ್ ಆಗುತ್ತದೆ ಎಂಬುದನ್ನು ಘೋಷಣೆ

ಮಾಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ? ಜಲಾಶಯಗಳಲ್ಲಿ ನೀರು ಇಲ್ಲ ಆದ್ದರಿಂದ, ದೇವರೆ ನಮ್ಮನ್ನು ಕಾಪಾಡಬೇಕೆಂದು ತಾವು ಈಗಾಗಲೇ ಹೇಳಿದ್ದೀರಿ. ಈ ರೀತಿಯಾದರೆ ಮುಂದಿನ ಗತಿ ಏನು? ಇದಕ್ಕೊಂದು ಏನಾದರೂ ಪರಿಹಾರವನ್ನು ಕಂಡು ಹಿಡಿಯಬೇಕು. ಮೊದಲು ಸಿಟಿಗಳಲ್ಲಿ ಕರೆಂಟ್ ಹೋಗುತ್ತಿರಲಿಲ್ಲ. ಇವತ್ತಿನ ದಿವಸ ಹಳ್ಳಿಗಳ ಗತಿಯನ್ನು ದೇವರೇ ಕಾಪಾಡಬೇಕು. ಹಳ್ಳಿಗಳಲ್ಲಿ ಎರಡು ದಿವಸವಾದರೂ ಕುಡಿಯುವುದಕ್ಕೆ ನೀರು ಇರುವುದಿಲ್ಲ. ಇವತ್ತಿನ ದಿವಸ ಹೆಣ್ಣುಮಕ್ಕಳು ಏನನ್ನೂ ಸಹ ಕುಟ್ಟುವುದಿಲ್ಲ. ಹೊಸದಾಗಿ ಬರುವ ಹೆಣ್ಣು ಮಗಳಿಗೆ ಬೀಸುವುದಕ್ಕೆ ಬರುವುದಿಲ್ಲ. ಆದ್ದರಿಂದ, ಎಲ್ಲರೂ ಗಿರಣಿಗೆ ಹೋಗಬೇಕಾಗಿದೆ. ಮತ್ತೆ ಕುಡಿಯುವ ನೀರನ್ನು ತೆಗೆದುಕೊಳ್ಳುವುದಕ್ಕೆ ಇವತ್ತಿನ ದಿವಸ ಬಾವಿಗಳಿಂದ ನೀರನ್ನು ಸೇದುವುದಿಲ್ಲ. ನಮ್ಮ ಕಡೆ ಬಾವಿಯಲ್ಲಿ ನೀರನ್ನು ಸೇದುವುದಕ್ಕೆ ಪವರ್ ಇರುವುದಿಲ್ಲ. ಆದ್ದರಿಂದ ಕರೆಂಟ್ ಹಾಕಿದರೆ ಮಾತ್ರ ಬಾವಿಯಿಂದ ಮೇಲಕ್ಕೆ ನೀರು ಬರಬೇಕು. ಕರೆಂಟ್ ಇಲ್ಲದಿದ್ದರೆ ಮೂರು ಮೂರು ದಿವಸ ಸಾಯಬೇಕಾಗುತ್ತದೆ. ಈ ರೀತಿಯಾದ ಸ್ಥಿತಿ ಇದ್ದಾಗ ಏನು ಗತಿಯಾಗುತ್ತದೆ? ಆದ್ದರಿಂದ, ತಾವು ನಿರ್ದಿಷ್ಟವಾದಂಥ ನಿರ್ಣಯವನ್ನು ಇದರ ಬಗ್ಗೆ ತೆಗೆದುಕೊಳ್ಳದಿದ್ದರೆ ಹಳ್ಳಿಗಳ ಮತ್ತು ಜಿಲ್ಲೆಗಳ ಸ್ಥಿತಿ ಚಿಂತಾಜನಕವಾಗುತ್ತದೆ. ಇವತ್ತಿನ ದಿವಸ ಬೆಂಗಳೂರು ಸಿಟಿಯಲ್ಲಿಯೇ ಈ ಗತಿಯಾಗಿದೆ. ಬೆಂಗಳೂರಿನಲ್ಲಿ ಈ ರೀತಿಯಾಗಿ ಯಾವತ್ತೂ ಕೂಡ ಆಗಿರಲಿಲ್ಲ. ಆದರೆ, ಇವತಿನ ದಿವಸ ಗಂಟೆ ಗಂಟೆಗೆ ಕರೆಂಟ್ ಹೋಗುತ್ತಿದೆ. ಆದ್ದರಿಂದ ಇದರ ಬಗ್ಗೆ ಒಂದು ಘೋಷಣೆ ಮಾಡಿ. ಘೋಷಣೆ ಮಾಡುವುದಕ್ಕೆ ನಿಮಗೇನು ತೊಂದರೆ ಇಲ್ಲ. ಆದರೆ, ಏಕೆ ತಾವು ಮಾಡುತ್ತಿಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಥರ್ಮಲ್ ಘಟಕವನ್ನು ಉದ್ಘಾಟನೆ ಮಾಡುವುದಕ್ಕೆ ಚಾಮಲಪುರಕ್ಕೆ ತಾವು ಹೋಗಿದ್ದೀರಿ. ಇದಕ್ಕೆ ಟೆಂಡರ್ ಕರೆಯಲಾಗಿದೆ ಎಂದು ಕೇಳಿದ್ದಕ್ಕೆ ಟೆಂಡರ್ ಕರೆಯಲಾಗಿದೆ ಎಂದು ಹೇಳಿದ್ದೀರಿ. ಮತ್ತೆ ತಾವು ಅಲ್ಲಿಗೆ ಹೋಗಿದ್ದಾಗ ಇಲ್ಲಿ ಮಾಡುವುದಿಲ್ಲ ಬಿಟ್ಟು ಬಿಡುತ್ತೇವೆಂಬ ಮಾತನ್ನು ಹೇಳಿದ್ದೀರಿ, ತಾವು ಅಲ್ಲಿ ಹೇಳಿ ಬಂದಿರುವುದೇ ಒಂದು ಆದರೆ, ಇಲ್ಲಿ ಟೆಂಡರ್ ಕರೆಯಲಾಗಿದೆ. ಆದರೆ, ಟೆಂಡರ್ ಕರೆದ ಮೇಲೂ ಇದನ್ನು ಬಿಟ್ಟು ಬಿಡುತ್ತೇವೆಂದು ಹೇಳತಕ್ಕಂಥದು ಸರಿಯಾದ ನೀತಿಯೇ? ಟೆಂಡರ್ ಕರೆಯುವುದಕ್ಕೆ ಹಣ ಖರ್ಚು ಮಾಡಿದ ಮೇಲೆ ಇದನ್ನು ಬಿಟ್ಟು ಬಿಡುತ್ತೀರಾ? ಈ ರೀತಿಯಾಗಿ ಬಿಡತಕ್ಕಂಥದು ಸರಿಯಾದದ್ದಲ್ಲ. ಆದ್ದರಿಂದ, ನಾನು ಕೇಳುವುದೇನೆಂದರೆ, ತಾವು ಅಲ್ಲಿಗೆ ಏಕೆ ಹೋಗಿದ್ದೀರಿ? ಅಲ್ಲಿಗೆ ಹೋದ ಮೇಲೆ ಇದನ್ನು ತಾವು ಹೇಳಬೇಕಾಗಿತ್ತು. ಆಯೋಗದ ಅಧ್ಯಕ್ಷರಾಗಿರುವ

ಮಾನ್ಯ ಪಾಂಡೆಯವರು ಅಲ್ಲಿಗೆ ಹೋಗಿದ್ದಾಗ ಅವರು ಅಲ್ಲಿ ಕುಳಿತುಕೊಳ್ಳುವುದಕ್ಕೆ ಬಿಟ್ಟಿಲ್ಲ. ದಿನಾಂಕ 9.03.2008ರಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ತಜ್ಞರ ಸಮಿತಿ ನೇಮಕಕ್ಕೆ ಪರಿಸರವಾದಿಗಳ ಆಗ್ರಹ. ಇದನ್ನು ಇಲ್ಲಿ ಓದುತ್ತೇನೆ.

ಅಧ್ಯಕ್ಷರು:– ಓದುವುದು ಬೇಡ. ಅವರ ಹತ್ತಿರ ಕೂಡ ಇದು ಇರುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಅಧ್ಯಕ್ಷರೆ, ಅಲ್ಲಿರತಕ್ಕಂಥವರು ಇದಕ್ಕೆ ವಿರೋಧ ಮಾಡಿದ್ದಾರೆ. ತಾವು ಯಾವುದೇ ಒಂದು ವಿದ್ಯುತ್ ಘಟಕವನ್ನು ಸ್ಥಾಪನೆ ಮಾಡುವುದಕ್ಕಿಂತ ಮೊದಲು ಅಲ್ಲಿ ಮಾಡುವುದಕ್ಕೆ ಬರುತ್ತದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಪರಿಸರ ತಜ್ಞರ ಸಮಿತಿ ವರದಿಯನ್ನು ಮೊದಲು ತೆಗೆದುಕೊಳ್ಳಬೇಕು. ಅಲ್ಲಿ ಮಾಡುವುದಕ್ಕೆ ಬರುತ್ತದೋ ಅಥವಾ ಇಲ್ಲವೋ ಅದನ್ನು ತಿಳಿದುಕೊಂಡ ಮೇಲೆ ನೀವು ಮಾಡಬೇಕೆಂದು ಅವರು ಹೇಳಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ ಒಂದು ಸಲ ನೀವು ಟೆಂಡರ್‌ಅನ್ನು ಕರೆದಿರುತ್ತೀರಿ. ಟೆಂಡರ್ ಕರೆದ ಮೇಲೆ, ನೀವು ಮಾಡುವುದಿಲ್ಲವೆಂದು ಕೂಡ ಹೇಳಿರುತ್ತೀರಿ, ಅಂದರೆ ಈಗ ಏನು ಮಾಡಬೇಕು. ಒಂದು ಕಡೆ ಈ ಪರಿಸ್ಥಿತಿ, ಇನ್ನೊಂದು ಕಡೆ ತಾವು ಏನು ಹೇಳಿದ್ದೀರೆಂದರೆ, ಇನ್ನೊಂದು ಸ್ಥಾವರ ಮಾಡುವುದಕ್ಕೆ ಭತ್ತೀಸಘಡಕ್ಕೆ ಹೋಗಿ ತೆಗೆಯುತ್ತೇವೆಂದು ಹೇಳಿರುತ್ತೀರಿ. ಪರಿಸರವಾದಿಗಳು ನಿಮಗೆ ಇಲ್ಲಿಯೇ ತೆಗೆಯುವುದಕ್ಕೆ ಕೊಡುತ್ತಿಲ್ಲ. ಬೇರೆ ರಾಜ್ಯದಲ್ಲಿ ಹೋಗಿ ನಿಮಗೆ ತೆಗೆಯುವುದಕ್ಕೆ ಸಾಧ್ಯವೇ? ತೆಗೆಯುವುದಕ್ಕೆ ಕೊಡುತ್ತಾರಾ? ನಿಮಗೆ ಪರವಾನಿಗೆ ಸಿಗುತ್ತದೆಯೇ? ಇದರ ಬಗ್ಗೆ ನೀವು ಯೋಚನೆಯನ್ನು ಮಾಡಿದ್ದೀರಾ? ನನಗೆ ಇದರ ಬಗ್ಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ನಾನು ಕೇಳುತ್ತಿದ್ದೇನೆ. ನಿರ್ದಿಷ್ಟವಾದ ತಮ್ಮ ನಿರ್ಣಯಗಳು ಏನಿವೆ. ಇದರ ಬಗ್ಗೆ ಪರಿಸರವಾದಿಗಳು ಮತ್ತು ಶ್ರೀ ಯು. ಆರ್. ಅನಂತಮೂರ್ತಿಯವರು ಹೇಳಿದ್ದಾರೆ. ಉಷ್ಣ ವಿದ್ಯುತ್ ಸ್ಥಾವರವನ್ನು ವಿರೋಧಿಸಿ ಅವರು ಒಂದು ದೊಡ್ಡ ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರೆ. ಇವೆಲ್ಲಾ ನೋಡಿದಾಗ ಒಂದು ಕಡೆ ವಿರೋಧವಿದೆ. ಒಂದು ಕಡೆ ಕರೆಂಟ್ ಇಲ್ಲ. ಒಂದು ಕಡೆ ಸ್ಥಾಪನೆ ಮಾಡುವುದಕ್ಕಾಗುತ್ತಿಲ್ಲ. ಎಲ್ಲಿ ಆಗುತ್ತದೆ ಅಲ್ಲಿ ಏಕೆ ಮಾಡುವುದಿಲ್ಲ. ನಾವು ಬೀದರ್‌ದಲ್ಲಿ ಮಾಡಿ ಎಂದು ಕೇಳಿಕೊಳ್ಳುತ್ತಿದ್ದೇವೆ. ಅಲ್ಲಿ ತಾವು ಮಾಡುವುದಿಲ್ಲ. ಅಲ್ಲಿ ತೆಗೆಯುವುದೇ ಇಲ್ಲ. ಅಲ್ಲಿ ಒಂದು ಥರ್ಮಲ್ ಪ್ಲಾಂಟ್‌ನ್ನು ಹಾಕಿ. ನಾವು ಮಾಡಿ ಎಂದು ಒತ್ತಾಯ ಮಾಡುತ್ತಿದ್ದೇನೆ ಅದರ ಬಗ್ಗೆ ನೀವು ಕೇಳುತ್ತಿಲ್ಲ. ಏಕೆಂದರೆ, ಅಲ್ಲಿ ಯಾರು ಕೇಳುವವರು ದಿಕ್ಕಿಲ್ಲವಲ್ಲ. ಬೀದರ್ ಎಂದರೆ ಎಲ್ಲರಿಗೂ ಹೇಗಾಗಿದೆ ಎಂದರೆ ಏನೂ ಲೆಕ್ಕದಲ್ಲಿಲ್ಲ. ನೋಡಿದರೆ ಎಲ್ಲಾ ಕಡೆ ಶೋಭಾಯಮಾನ. ಮೈಸೂರು ನಕ್ಷೆ

ನೋಡಿದರೆ ಬೀದರ್ ಹೇಗಿದೆ ಎಂದರೆ ಶಿಖರವಿದ್ದ ಹಾಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ನೀವು ಒತ್ತಾಯ ಮಾಡಿದರೆ ಅವರ ಕೇಳುವುದಿಲ್ಲ. ಹೊಡೆಯಬೇಕು. ಹೊಡೆದರೆ ಕೇಳುತ್ತೇವೆಂದು ಅವರು ಹೇಳುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :–ಹೊಡೆದರೆ ಕೇಳುತ್ತಾರಾ? ಅದಕ್ಕಾಗಿ ಇದರ ಬಗ್ಗೆ ತಾವು ಏನಾದರೂ ಒಂದು ನಿರ್ಣಯವನ್ನು ಮಾಡಿ. ನಾವು ಎಲ್ಲಿ ಮಾಡಿ ಎಂದು ಹೇಳುತ್ತೇವೆ ಅಲ್ಲಿ ಮಾಡಿ. ಎಲ್ಲಿ ಮಾಡಬೇಡಿ ಎಂದು ಹೇಳುತ್ತಾರೆ. ಎಲ್ಲಿ ಪರಿಸರವಾದಿಗಳು ವಿರೋಧ ಮಾಡುತ್ತಾರೆ, ನಿಮಗೆ ಎಲ್ಲಿ ಜಾಗವಿಲ್ಲ, ಅಲ್ಲಿ ಮಾಡುವುದಕ್ಕೆ ಏಕೆ ಹೋಗುತ್ತೀರಿ? ಇದರ ಬಗ್ಗೆ ತಾವು ಕರೆಕ್ಟ್ ಆಗಿ ಉತ್ತರ ಕೊಡಬೇಕು. ಬೆಂಗಳೂರು ಎಲೆಕ್ಟ್ರಿಸಿಟಿ ಬಗ್ಗೆ ಏನು ನಿರ್ಣಯ ತೆಗೆದುಕೊಂಡಿರುತ್ತೀರಿ. ಗತಿ ವಿದ್ಯುಚ್ಛಕ್ತಿ ಏನಾಗಬೇಕು.. ವಿದ್ಯುತ್‌ಅನ್ನು ನೀವು ಬಂದ್ ಮಾಡುತ್ತೀರಿ. ಇದರ ಬಗ್ಗೆ ತಾವು ಒಂದು ಸ್ಟೇಟ್‌ಮೆಂಟ್ ಕೊಡಬೇಕೆಂದು ಕೇಳುತ್ತೇನೆ. ಇನ್ನೊಂದು ವಿಷಯ ಯಾರಾದರೂ ಸೋಲಾರ್ ಎನರ್ಜಿ ಮಾಡುವವರು ಇದ್ದರೆ ಸಬ್ಸಿಡಿ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿರುತ್ತೀರಿ, ಅದಕ್ಕೆ ಸಬ್ಸಿಡಿ ಕೊಡುತೇವೆ ಎನ್ನುವ ಘೋಷಣೆಯನ್ನು ಮಾಡಿದರೆ ಬಹಳ ಜನರು ಮಾಡುವವರು ಇದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಶಾಸಕರಾದ ಗುರುಪಾದಪ್ಪ ನಾಗಮಾರಪಲ್ಲಿಯವರು ತಿಳಿಸಿದ ಪ್ರಕಾರ ಇವತ್ತು ನಾವು ನಿರ್ದಿಷ್ಟವಾಗಿ ದೈನಂದಿನ ವಿದ್ಯುತ್ ಬಳಕೆಯನ್ನು ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಸುಮಾರು ನೂರು ದಶಲಕ್ಷ ಯೂನಿಟ್‌ಗಳಿಗೆ ಬಳಕೆಯನ್ನು ನಿರ್ದಿಷ್ಟಗೊಳಿಸಲಾಗಿದ್ದು ಜುಲೈ ಹಂತದವರೆಗೆ ಶೇಕಡಾ 20 ರಷ್ಟು ಆಗಸ್ಟ್ 8 ರಲ್ಲಿ 25 ಶೇಕಡಾ ರಷ್ಟು ಲೋಡ್ ಶೆಡ್ಡಿಂಗ್ ಮಾಡುವುದು ಅನಿವಾರ್ಯವೆಂದು ಹೇಳಿದ್ದೇವೆ. ಆ ಪ್ರಕಾರವಾಗಿ ಇವತ್ತು ನಿರ್ದಿಷ್ಟವಾಗಿ ಹೇಳುತ್ತಿದ್ದೇನೆ. ಜೊತೆಗೆ ಕೈಗಾರಿಕೆಗಳಿಗೆ, ಕಮರ್ಷಿಯಲ್ ಪರ್‌ಪಸ್‌ಗೆ, ಡೊಮೆಸ್ಟಿಕ್ ಪರ್‌ಪಸ್‌ಗೆ, ಅದೇ ರೀತಿ ರೈತರಿಗೆ ಯಾವ್ಯಾವ ಗಂಟೆಯಲ್ಲಿ ಎಷ್ಟೆಷ್ಟು ವಿದ್ಯುತ್‌ಅನ್ನು ಕೊಡುತ್ತೇವೆ, ಯಾವ್ಯಾವ ಗಂಟೆಯಲ್ಲಿ ನಿಲ್ಲಿಸುತೇವೆ ಎನ್ನುವ ಬಗ್ಗೆ ನಾಳೆ ಅಥವಾ ನಾಡಿದ್ದರಲ್ಲಿ ನಾವು ಘೋಷಣೆಯನ್ನು ಕೂಡ ಮಾಡುವವರು ಇದ್ದೇವೆ. ಎರಡನೆಯದಾಗಿ ಚಾಮಲಾಪುರದಲ್ಲಿ ಒಂದೇ ಅಲ್ಲ, ಜೇವರ್ಗಿ ಇರಬಹುದು, ಘಟಪ್ರಭಾ ಇರಬಹುದು ಎಲ್ಲಾ ಭಾಗದಲ್ಲಿಯೂ ಕೂಡ ಎಲ್ಲೆಲ್ಲಿ ವಿದ್ಯುತ್ ಸ್ಥಾವರಗಳನ್ನು ತೆಗೆಯಬೇಕೆಂದು ಯೋಚನೆ ಮಾಡುತ್ತೇವೆ ಆ ಎಲಾ ಕಡೆ ವಿರೋಧವು ಇದೆ, ಇನ್ನೊಂದು ಕಡೆ ಸ್ವಾಗತವು ಇದೆ. ಮೈಸೂರಿಗೆ ಹೋದ ಸಂದರ್ಭದಲ್ಲಿ ಚಾಮಲಾಪುರದ ಬಗ್ಗೆ ವಿರೋಧ ಮಾಡಿದವರು ನನಗೆ ಸಿಕ್ಕಿದ್ದರು. ಅದನ್ನು ಸ್ವಾಗತ

ಮಾಡಿದವರು ಹೇಳಿದರು. ಹಾಗಾಗಿ ಅಲ್ಲಿ ನಾವು ಏನು ನಿಲ್ಲಿಸುತ್ತೇವೆಂದು ಎಲ್ಲಿಯೂ ಹೇಳಿಲ್ಲ. ಅದರ ಬಗ್ಗೆ ಯೋಚನೆ ಮಾಡುತ್ತೇವೆಂದು ಹೇಳಿದ್ದೇವೆ. ಜೊತೆಗೆ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ವಿದ್ಯುತ್ ಸ್ಥಾವರವನ್ನು ಹಾಕಬೇಕೆಂದು ಯೋಚನೆ ಮಾಡುತ್ತಿದ್ದೇವೋ ಅದಕ್ಕೆ ಸಂಬಂಧಪಟ್ಟ ಪರಿಸರವಾದಿಗಳು ಇರಬಹುದು, ಸ್ವಾಮೀಜಿಗಳು ಇರಬಹುದು ಆ ಭಾಗದ ಚುನಾಯಿತ ಪ್ರತಿನಿಧಿಗಳು ಇರಬಹುದು ಅವರ ಜೊತೆ ಕುಳಿತು ಚರ್ಚೆ ಮಾಡಿ ತೀರ್ಮಾನವನ್ನು ನಾವು ತೆಗೆದುಕೊಳ್ಳುವವರು ಇದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮೊದಲೇ ಇದರ ಬಗ್ಗೆ ತಜ್ಞರಿಂದ ಹಾಗೂ ಪರಿಸರವಾದಿಗಳಿಂದ ರಿಪೋರ್ಟ್‌ಅನ್ನು ತೆಗೆದುಕೊಂಡಿರುತ್ತೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಅದರ ಬಗ್ಗೆ ಚರ್ಚೆ ಕೂಡ ನಡೆಯುತ್ತಿದೆ. ಜೊತೆಗೆ ಟೆಂಡರ್‌ಅನ್ನು ಕರೆದಿರುತ್ತೇವೆ. ಒಂದು ಅರ್ಜಿ ಇನ್ನು ಬಂದಿಲ್ಲ. ಚಾಮಲಾಪುರಕ್ಕೆ ಒಂದು ಅರ್ಜಿ ಬಂದಿಲ್ಲ. ಇದರ ಜೊತೆಗೆ ಬೀದರ್ ಬಗ್ಗೆ ತಾವು ಹೇಳುತ್ತಿದ್ದಿರಿ. ಈ ಸರ್ಕಾರ ಬಂದ ಮೇಲೆ ಇದರ ಬಗ್ಗೆ ಯೋಚನೆ ಮಾಡುವುದಕ್ಕೆ ಕೂಡ ನಾವು ಶುರು ಮಾಡಿದ್ದೇವೆ. ನಮ್ಮಲ್ಲೇ ಮಾಡುತ್ತಿಲ್ಲ ಛತ್ತೀಸ್ ಘಡದಲ್ಲಿ ಏನು ಮಾಡುತ್ತೀರಿ ಎಂದು ತಾವು ಹೇಳುತ್ತಿದ್ದೀರಿ. ಆ ರಾಜ್ಯ ಸರ್ಕಾರದ ಜೊತೆಯಲ್ಲಿ ನಾನು ಹಾಗೂ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಾತುಕತೆಯನ್ನು ನಾಳೆ ನಡೆಸುತ್ತಿದ್ದೇವೆ. ಆ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ರಮಣ್‌ಸಿಂಗ್‌ರವರು ಬರುತ್ತಿದ್ದಾರೆ. ಅವರ ಜೊತೆಯಲ್ಲಿ ಒಂದು ವಿಶೇಷ ಸಭೆಯನ್ನು ಮಾಡಿ ಅಲ್ಲಿ ಮಾಡುವುದಕ್ಕೆ ನಮಗೆ ಅವಕಾಶವಿದೆ, ಆ ಸರ್ಕಾರದ ಒಪ್ಪಿಗೆಯನ್ನು ತೆಗೆದುಕೊಂಡೇ ನಾವು ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– (ಮಾನ್ಯ ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಒಂದು ನನಗೆ ಅರ್ಥವಾಗಲಿಲ್ಲ. ಇದರಲ್ಲಿ ತಾವು ಕೂಡ ಕ್ಲಾರಿಫೈ ಮಾಡಿಕೊಳ್ಳಬೇಕು. ರಾಜ್ಯವು ಎದುರಿಸುತ್ತಿರುವ ವಿದ್ಯುತ್ ಕೊರತೆ ಎಷ್ಟು? ಈ ಕೊರತೆಯನ್ನು ಸರಿದೂಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? ಇದಕ್ಕೆ ಉತ್ತರ (ಬಿ) ನಲ್ಲಿ ಪ್ರಸಕ್ತ ವರ್ಷ 2008–09 ರಲ್ಲಿ ಮುಂಗಾರು ವಿಫಲವಾಗಿದ್ದು ರಾಜ್ಯದಲ್ಲಿ ಪ್ರಮುಖ ವಿದ್ಯುತ್ ಜಲಾಶಯಗಳಲ್ಲಿ ನೀರಿನ ಮಟ್ಟ ಕಡಿಮೆ ಇದ್ದು 26 ದಶಲಕ್ಷ ಯೂನಿಟ್ ಕೊರತೆಯ ವಿದ್ಯುತ್‌ಅನ್ನು ಅನುಭವಿಸುತ್ತಿದೆ. ಈ ಪ್ರಶ್ನೆಯೇ ಬೇರೆ? ಅವರು ಬರೀ ನಿಮಗೆ ಮುಂಗಾರು ಬೆಳೆಗೆ ಎಷ್ಟು ಬೇಕು ಎನ್ನುವುದರ ಬಗ್ಗೆ ಕೇಳಿಲ್ಲ. ಅವರು ಕೇಳಿದ್ದು ಏನೆಂದರೆ, ರಾಜ್ಯವು

ಎದುರಿಸುತ್ತಿರುವ ವಿದ್ಯುತ್ತಿನ ಬಗ್ಗೆ, ನಿಮ್ಮ total requirement ಎಷ್ಟು? Consumption ಎಷ್ಟು? Production ಎಷ್ಟು? ಎಷ್ಟು ಕೊರತೆ ಇದೆ ಎನ್ನತಕ್ಕಂಥದ್ದು ಆ ದೃಷ್ಟಿಯಿಂದ ಅವರು ಕೇಳಿರತಕ್ಕಂಥದ್ದು. (ಅ) ಪ್ರಶ್ನೆಯಲ್ಲಿ, ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನ ಪ್ರಮಾಣ ಎಷ್ಟು? ಯಾವ್ಯಾವ ಮೂಲಗಳಿಂದ ಎಷ್ಟೆಷ್ಟು ವಿದ್ಯುತ್ತಿನ ಉತ್ಪಾದನೆಯಾಗುತ್ತಿದೆ ಎನ್ನುವ ವಿವರವನ್ನು ಕೇಳುತ್ತಾ, ಮುಂದೆ ಕೊರತೆ ಏನಿದೆ ಎನ್ನುವುದನ್ನು ಕೇಳಿದ್ದಾರೆ. ಇವರು ಅದನ್ನು ಬಿಟ್ಟು ಈ ವರ್ಷ ಮುಂಗಾರಿನಲ್ಲಿ ಇಷ್ಟು ವಿಫಲವಾದ ಕಾರಣ ಇಷ್ಟು ಕೊರತೆ ಇದೆ ಎನ್ನತಕ್ಕಂಥದ್ದನ್ನು total ನಿಮ್ಮ requirement + Consumption ಇವತ್ತು ಕೊರತೆ ಇರತಕ್ಕಂಥದ್ದು ಎಷ್ಟು ಎನ್ನತಕ್ಕಂಥದ್ದನ್ನು ಹೇಳಬೇಕು ಇದು ಒಂದು. ಆಮೇಲೆ ನಾವು ಅನೇಕ ಸಲ ಮೆಗಾವ್ಯಾಟ್ ನಲ್ಲಿ ನೋಡುತ್ತಿದ್ದೆವು, ಆದರೆ ಈಗ ಇದು ಕೊಟ್ಟಿದ್ದು ನಮಗೆ ಗೊತ್ತಾಗುತಿಲ್ಲ. ದಶಲಕ್ಷ ಯೂನಿಟ್ ಎಂದು ಒಂದು ಕಡೆ ಹೇಳುತ್ತೀರಿ. ಮುಂದಿನ ಪ್ರಶ್ನೆಗಳಲ್ಲಿ ಮೆಗಾವ್ಯಾಟ್ ಎಂದು ಹೇಳುತ್ತಿದ್ದೀರಿ. ಅದಕ್ಕಾಗಿ ಇದು Confusion ಇದೆ. ಅದಕ್ಕಾಗಿ ಉತ್ಪಾದನೆ ಮಾಡತಕ್ಕಂಥ ಮೆಗಾವ್ಯಾಟ್ ಎಷ್ಟು? ಕೊರತೆ ಇರತಕ್ಕಂಥದ್ದು ಎಷ್ಟು? ಈಗ on going project work ಎಷ್ಟು? ಇದು ಮೊದಲನೇ ಪ್ರಶ್ನೆ. ಇನ್ನು ಎರಡನೇ ಪ್ರಶ್ನೆ. ಚಾಮಲಾಪುರ, ಜೇವರ್ಗಿ, ಘಟಪ್ರಭಾ ಇವುಗಳಿಗೆ ನೀವು application ಬಂದಿಲ್ಲವೆಂದು ಹೇಳುತ್ತೀರಿ. ನೀವು ಕೊಟ್ಟಿರುವ 1 to 20 ಯಲ್ಲಿ ಕೊಟ್ಟಿರುವ ನಿಮ್ಮ ಉತ್ತರ ಏನು? ಕೊನೆಯ ಪೇಜ್‌ನಲ್ಲಿ ಇದೆಯಲ್ಲಾ, ಗುಜರಾತ್ ಎನರ್ಜಿ ಕಾರ್ಪೊರೇಷನ್, ಲಾಂಗೋ ಇನ್‌ಫ್ರೆಕ್ಟ್, ಕೊನ್ಸಿನ್ ಗ್ರಾಸ್ ಪವರ್ ಇವು ಯಾವುವು? ಒಂದು ಕಡೆ ಇಲ್ಲವೆಂದು ಹೇಳುತ್ತೀರಿ. 1 to 20 application ಬಂದಿವೆ. ಅದೇ ರೀತಿಯಾಗಿ ಘಟಪ್ರಭಾ ಮತ್ತು ಜೇವರ್ಗಿಗೆ ಕೂಡ ಬಂದಿವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, half an hour ಚರ್ಚೆಗೆ ಇದನ್ನು ಕೊಡುತ್ತೇವೆಂದು ಹೇಳಿರುತ್ತಿರಿ. ನಮ್ಮ ಪ್ರಶ್ನೆಗಳು ಇವೆ. ನಮ್ಮ ಪ್ರಶ್ನೆಗಳನ್ನು ನಿಲ್ಲಿಸುವುದಿಲ್ಲವೆಂದರೆ ನಮ್ಮದೇನು ತಕರಾರು ಇಲ್ಲ. ನೀವು ನಮ್ಮನ್ನು ಕೂರಿಸಿ ಒಂದು ಗಂಟೆಯಾಯಿತು ಪ್ರಶ್ನೆಯನ್ನು ಕೇಳಬೇಡಿ ಎಂದು ಹೇಳಬಾರದು.

ಅಧ್ಯಕ್ಷರು:– ವಿದ್ಯುತ್ತಿನ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಕೊಡುತ್ತೇನೆಂದು ಕೂಡ ಹೇಳಿರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಇಲ್ಲಿ applications ಬಂದಿವೆ. ಆದರೆ applications ಬಂದಿಲ್ಲವೆನ್ನತಕ್ಕಂಥದ್ದು ಒಂದು ಕಡೆ ಹೇಳುತ್ತಿದ್ದೀರಿ. ಏನು ನಿಮಗೆ ಓದಿಕೊಂಡು ಬರುವುದಕ್ಕೆ ಆಗಲಿಲ್ಲವೋ? ನಿಮ್ಮ ಪೇಪರ್ ನಿಮಗೆ ನೋಡುವುದಕ್ಕೆ ಆಗಲಿಲ್ಲವೋ ? ಏನಿದು. ಅಂದರೆ seriousness ಇಲ್ಲವೋ? ಅವರೇ ಸಪ್ಲೈ ಮಾಡಿರುವಂಥ ಉತ್ತರ ಇದು.

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರೆ, ಈ ವಿದ್ಯುತ್ತಿನ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆ. ಅಲ್ಲಿ ಇದರ ಬಗ್ಗೆ detail ಆಗಿ ಚರ್ಚೆಯನ್ನು ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಅರ್ಧ ಗಂಟೆ ಚರ್ಚೆಯಲ್ಲಿ ನೀವು ಇಡೀ ರಾಜ್ಯದ ವಿದ್ಯುತ್ತಿನ ಬಗ್ಗೆ ಮಾಡಿ.

ಅಧ್ಯಕ್ಷರು:– ತಾವು ಕೇಳಿರುವ ವಿಷಯ ಇಡೀ ರಾಜ್ಯದ ಬಗ್ಗೆ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ನಾಗಮಾರಪಲ್ಲಿಯವರು ಎಲ್ಲಿದೆಯೋ ಬೇರೆ ಬೇರೆ ಸಣ್ಣಮಟ್ಟದ್ದು ಕೇಳಿ ಕುಳಿತುಕೊಂಡರು. ಅವರು ಹಾಕಿರುವ ಮೇಜರ್ ಪ್ರಶ್ನೆ ಏನೆಂದರೆ, ಯಾವ್ಯಾವ ಘಟಕಗಳು ಎಷ್ಟೆಷ್ಟು ಉತ್ಪಾದನೆ ಮಾಡುತ್ತವೆ, ಕೊರತೆ ಎಷ್ಟು? ಮತ್ತೆ ಬೇರೆ ಬೇರೆ resources ನಿಂದ ಏನು ಮಾಡುತ್ತಿದ್ದೀರಿ ಎನ್ನತಕ್ಕಂಥದ್ದರ ಬಗ್ಗೆ ಸವಿಸ್ತಾರವಾಗಿ ಕೇಳಿದ್ದಾರೆ.

ಅಧ್ಯಕ್ಷರು:– ತಾವು ಡೀಟೇಲ್ ಆಗಿ ಕೇಳಿದಿರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ನಾನು ಕೇಳಿದ್ದು ಅಲ್ಲ ಸಾರ್, ನೀವು ಹೇಳಿದ್ದನ್ನು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು:– ತಾವು ಉತ್ತರದಲ್ಲಿ ಏನು ಸರಿಯಿಲ್ಲವೆನ್ನುವುದನ್ನು ತೋರಿಸಿ ಕೊಟ್ಟಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಅವರೇ ಕೊಟ್ಟಿರುವ ಉತ್ತರ. ಅದನ್ನು ನೀವು ಓದಿ. ಅದು ತಪ್ಪಾಗುತ್ತಿದೆಯೋ ಅಥವಾ ಇಲ್ಲವೋ, ನನ್ನದು ತಪ್ಪಾದರೆ ನಾನು ಕ್ಷಮೆ ಕೇಳುತ್ತೇನೆ. ಇದರ ಬಗ್ಗೆ ತಾವು ನೋಡಿ.

ಅಧ್ಯಕ್ಷರು:– ಗೊತ್ತಾಯಿತು, ತಾವು ಹೇಳಿರುವುದರಲ್ಲಿ ಅರ್ಥವಿದೆ. ಅರ್ಧಗಂಟೆ ಚರ್ಚೆಯಲ್ಲಿ ಇದರ ಬಗ್ಗೆ.... ಪ್ರಸ್ತಾಪ ಮಾಡಿ.... ಇನ್ನು ಎರಡು–ಮೂರು ಪ್ರಶ್ನೆಗಳು ಇವೆ. ಅದಕ್ಕಾಗಿ....

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಏಕೆ ಇಷ್ಟು ನಿರಾಸಕ್ತಿ. ನೋಡಿಕೊಂಡು ಬರಬೇಕು, ತಿಳಿದುಕೊಂಡು ಬರಬೇಕು. ಚರ್ಚೆ ಮಾಡಬೇಕು, ಅವರು ಅನುಭವಿಗಳು ಇದ್ದಾರೆ, ಅವರೇನು ಹೊಸದಾಗಿ ಬಂದಿದ್ದಾರೆಯೇ?

ಶ್ರೀ ಕೆ.ಎಸ್. ಈಶ್ವರಪ್ಪ:– ಅವರು ಈಗ ಏನೇನು ಪ್ರಶ್ನೆಗಳನ್ನು ಕೇಳಿದ್ದಾರೆ, ಆ ಎಲ್ಲಾ ಪ್ರಶ್ನೆಗಳಿಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಇಲ್ಲಿ ಪ್ರಶ್ನೆ ಬಂದಿರುವುದು, ಉಪ ಪ್ರಶ್ನೆಯಲ್ಲಿ ತಾವು ಬೀದರ್ ಬಗ್ಗೆ ಕೇಳಿದಿರಿ, ಆ ಪ್ರಶ್ನೆಗೂ ಉತ್ತರ ಹೇಳಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಇನ್ನು ಕೇಳುವುದು ಇದೆ. ಎಷ್ಟು ಉತ್ಪಾದನೆಯಾಗಿದೆ. ತಾವು ಯೂನಿಟ್ ಮೇಲೆ ಕೊಟ್ಟಿದ್ದೀರಾ, ಯೂನಿಟ್ ಬಗ್ಗೆ ನನಗೆ ಅರ್ಥವಾಗಲಿಲ್ಲ, ಅದಕ್ಕಾಗಿ ನಾನು ಕೇಳಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಪ್ರಶ್ನೆ (ಅ) ನಲ್ಲಿ ಏನಿದೆ? ಇದರ ಕೆಳಗಡೆ ತಾವು ಉತ್ತರವನ್ನು ಕೊಟ್ಟಿದ್ದೀರಿ. ತಾವು ಎಷ್ಟೆಷ್ಟು ಮೆಗಾವ್ಯಾಟ್ ಉತ್ಪಾದನೆ ಆಗುತ್ತಿದೆ ಎಂದು ಯೂನಿಟ್ ಲೆಕ್ಕದಲ್ಲಿ ನಾನು ಹೇಳಿದ ಹಾಗೆ ಉತ್ತರವನ್ನು ಕೊಟ್ಟಿದ್ದೀರಿ. ಇನ್ನು ಎರಡನೆಯದು ರಾಜ್ಯವು ಎದುರಿಸುತ್ತಿರುವ ವಿದ್ಯುತ್ತಿನ ಕೊರತೆ ಎಷ್ಟು? ಈ ಕೊರತೆಯನ್ನು ಸರಿದೂಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಇದಕ್ಕೆ ಉತ್ತರ ಎಲ್ಲಿದೆ? ಆಮೇಲೆ ಮೂರನೆಯದು ಚಾಮಲಾಪುರದ ಬಗ್ಗೆ ತಾವು ಹೇಳಿದ್ದೀರಿ, ಅಲ್ಲಿ ಅಪ್ಲಿಕೇಷನ್ ಇಲ್ಲ. ನೀವೇ 26 ಅಪ್ಲಿಕೇಷನ್‌ಗಳು ಇವೆ ಎಂದು ಉತ್ತರವನ್ನು ಕೊಟ್ಟಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ:– ಆ ಸಂಬಂಧ ಅರ್ಜಿ ಬಂದಿದೆ. ಚಾಮಲಾಪುರ ಗ್ರಿಡ್‌ಗೆ ಇನ್ನು ಅರ್ಜಿ ಬಂದಿಲ್ಲ. ಇನ್ನು ಎರಡನೆಯದು ಮಾನ್ಯ ವಿರೋಧಪಕ್ಷದ ನಾಯಕರು ತಿಳಿಸಿದ ಹಾಗೆ ಮೊದಲನೆಯದಕ್ಕೆ ರಾಜ್ಯಕ್ಕೆ ಪ್ರತಿದಿನ ಅಗತ್ಯವಿರುವ ವಿದ್ಯುತ್ತಿನ ಪ್ರಮಾಣವೆಷ್ಟು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. 124 ದಶಲಕ್ಷ ಯೂನಿಟ್‌ಗಳೆಂದು ತುಂಬಾ ಸ್ಪಷ್ಟವಾಗಿ ಹೇಳಿದ್ದೇವೆ. ಇನ್ನು ಎರಡನೆಯದು ಉತ್ಪಾದನೆ. ಪ್ರತಿ ದಿನಕ್ಕೆ ಎಷ್ಟೆಷ್ಟು ಬೇಕೆಂದು ತಾವು ಕೇಳಿದ್ದೀರಿ. ಪ್ರತಿ ದಿನಕ್ಕೆ ಸಂಬಂಧಪಟ್ಟ ಹಾಗೇ ಸ್ಟೇಟ್‌ಮೆಂಟ್‌ಅನ್ನು ಸಹ ಕೊಟ್ಟಿದ್ದೇನೆ. ಅದನು ತಾವು ಓದಿ ಎಂದು ಹೇಳಿದರೆ ಡೀಟಲ್ ಆಗಿ ಓದುತ್ತೇನೆ. ನಾವು ಯೂನಿಟ್ ಎಂದು ಕೊಟ್ಟಿದ್ದೇವೆ. ತಮಗೆ ಮೆಗಾವ್ಯಾಟ್‌ಗೆ ಬೇಕೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– 100 ಯೂನಿಟ್ ಉತ್ಪಾದನೆ ಮಾಡುತ್ತೇವೆ, 128 ಯೂನಿಟ್ ಬೇಕಾಗುತ್ತದೆ, 28 ಯೂನಿಟ್ ಕಡಿಮೆ ಇದೆ ಎಂದು ತಾವು ಉತ್ತರವನ್ನು

ಕೊಟ್ಟಿದ್ದೀರಿ. ಯೂನಿಟ್ ಎಂದರೆ ಏನು ಎಂದು ನನಗೆ ಅರ್ಥವೇ ತಿಳಿದಿರುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:– ನಮಗೆ ಮೆಗಾವ್ಯಾಟ್‌ಗೆ ಬೇಕೆಂದರೆ ಉತ್ತರವನ್ನು ಮೆಗಾವ್ಯಾಟ್‌ನಲ್ಲಿ ಹೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಯೂನಿಟ್ ಎಂದರೆ ನಮಗೆ ಹೇಗೆ ಗೊತ್ತಾಗಬೇಕು?

ಅಧ್ಯಕ್ಷರು:– ಅರ್ಧಗಂಟೆ ಕಾಲಾವಧಿಯಲ್ಲಿ ಈ ಬಗ್ಗೆ ಡೀಟೇಲ್ ಆಗಿ ಚರ್ಚೆ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಇಲ್ಲಿ ಪ್ರಶ್ನೆ ಕೇಳತಕ್ಕಂತಹ ಉದ್ದೇಶವೇನೆಂದರೆ, ನೀವು ಹೊರಗಡೆ ಏನು ಸ್ಥಾಪನೆ ಮಾಡುತ್ತೇವೆಂದು ಸಾವಿರ 2 ಸಾವಿರ ಮೆಗಾವ್ಯಾಟ್ ಎಂದು ಹೇಳುತ್ತೀರಿ. ಅದಕ್ಕಾಗಿ to know the total, ನಿಮ್ಮಲ್ಲಿ ಎಷ್ಟು electricity production ಆಗುತ್ತಿದೆ? ಇಲ್ಲಿ ಎಷ್ಟು ಕೊರತೆ ಇದೆ, ಆ ಕೊರತೆಯನ್ನು ನೀಗಿಸುವ ಬಗ್ಗೆ ಮತ್ತೆ ಯಾವ್ಯಾವ ಸೋರ್ಸ್‌ನಿಂದ ಏನು ಮಾಡಬೇಕೆಂದು ತಾವು ಹೇಳುತ್ತೀರಿ ಎನ್ನುವಂತಹ ಪ್ರಶ್ನೆ ಮತ್ತು ಉದ್ದೇಶದಿಂದ ಕೇಳಿರುವಂಥ ಪ್ರಶ್ನೆಯಾಗಿದೆ. ಅದಕ್ಕೆ ಉತ್ತರ ಬಂದರೆ ಸಾಕು. ಅದನ್ನು ತಾವು ಬಿಟ್ಟು ದಿನನಿತ್ಯ ಎಷ್ಟು ಬಳಸುತ್ತಾರೆಂದು ಆ ರೀತಿಯಾಗಿ ಉತ್ತರವನ್ನು ಕೊಟ್ಟರೆ ಇದು ಎಂತಹ ನ್ಯಾಯ. ಅದು ಅಲ್ಲ. ಈ ಬಗ್ಗೆ ಸಮಗ್ರವಾಗಿ ಹೇಳಬೇಕು.

ಅಧ್ಯಕ್ಷರು: ಆಯಿತು ಈ ಬಗ್ಗೆ ಅರ್ಧಗಂಟೆ ಕಾಲಾವಧಿ ಚರ್ಚೆಯಲ್ಲಿ ಡೀಟೇಲ್ ಆಗಿ ಚರ್ಚೆ ಮಾಡೋಣ. ಮಾನ್ಯ ಬಾಲಕೃಷ್ಣರವರೇ ತಾವು ಪ್ರಶ್ನೆಯನ್ನು ಕೇಳಿ. ಮಾನ್ಯ ನಾಗಮಾರಪಲ್ಲಿಯವರೇ ಈ ಬಗ್ಗೆ ಡಿಟೇಲ್ ಆಗಿ ಚರ್ಚೆಯಾಗಬೇಕಾಗಿದೆ. ನೀವು ತಿಳಿದುಕೊಂಡಿರುವಷ್ಟು ಈ ಪ್ರಶ್ನೆ ಸಿಂಪಲ್ ಇಲ್ಲ. ಈ ಬಗ್ಗೆ ಡಿಟೇಲ್ ಆಗಿ ಉತ್ತರ ಬೇಕಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನನ್ನ ಪ್ರಶ್ನೆ ಇನ್ನು ಮುಗಿದಿಲ್ಲ. ಶುಗರ್ ಫ್ಯಾಕ್ಟರಿಯಿಂದ ತಾವು ವಿದ್ಯುತ್ ಅನ್ನು ತೆಗೆದುಕೊಳ್ಳುತ್ತಿದ್ದೀರಿ. In KPTCL ಅವರಿಗೆ 2.80 ಪೈಸೆಗೆ ಕೊಡುತ್ತೀರಿ, ಬಾಕಿ ಪ್ರೈವೇಟ್‌ನವರಿಗೆ 3.94 ಪೈಸೆಗೆ ಕೊಡುತ್ತೀರಿ ? ಇದು ಯಾವ ನ್ಯಾಯ ? ನಾವು ನಿಮಗೆ ಏತಕ್ಕಾಗಿ ಕೊಡಬೇಕೆಂದು ಇದ್ದೇವೆ. ರಿಲೆಯೇನ್ಸ್ ಮತ್ತು ಟಾಟಾ ಅವರುಗಳು 7.00 ರೂಗಳಿಗೆ ಕೊಡುತ್ತಿದ್ದಾರೆ. ಅವರಿಗೆ

ಏತಕ್ಕಾಗಿ ಕೊಡಬಾರದು. ಏತಕ್ಕಾಗಿ ನೀವು ಅವರಿಗೆ ಮಾರಬಾರದು. ನೀವು ನಮಗೆ ತೊಂದರೆಯನ್ನು ಕೊಡುತ್ತಿದ್ದರೆ, ನಾವು ಏತಕ್ಕಾಗಿ ಬೇರೆ ಕಡೆಗೆ ಹೋಗಬಾರದು. ನಾವು ಗೌರ್ನಮೆಂಟ್‌ಗೆ ಕೊಡೋಣ ಎಂಬ ಒಳ್ಳೆಯ ಉದ್ದೇಶದಿಂದ ಕೊಡುತ್ತಿದ್ದೇವೆ. ಅದಕ್ಕೆ ತಾವು ನಮಗೆ ಉಲ್ಟಾ ಮಾಡಿದರೆ ನಮ್ಮ ಗತಿ ಏನು ?

ಶ್ರೀ ಕೆ.ಎಸ್. ಈಶ್ವರಪ್ಪ : ನೀರು ಮುಖಾಂತರ ವಿದ್ಯುತ್ ಉತ್ಪಾದನೆ ಆದರೆ ಬಹಳ ಕಡಿಮೆ ರೇಟ್ ಆಗುತ್ತದೆ. ಕೋಲ್ ಮುಖಾಂತರ ಉತ್ಪಾದನೆ ಮಾಡಿದರೆ ಬೇರೆಯಾಗುತ್ತದೆ. ವಿಂಡ್ ಮುಖಾಂತರ ಉತ್ಪಾದನೆ ಮಾಡುವವರು ಅವರು ಲಾಭವನ್ನು ಇಟ್ಟುಕೊಳ್ಳುವುದರಿಂದ ನಮಗೆ ರೇಟ್ ಜಾಸ್ತಿಯಾಗುತ್ತದೆ. ಈ ರೀತಿ ಒಂದೊಂದಕ್ಕೆ ಒಂದೊಂದು ರೇಟ್ ಇದೆ. Co-generation ಗೆ separate ಇರುವುದು ಹೌದು. ಹಾಗಾಗಿ ರಾಜ್ಯ ಸರ್ಕಾರದಿಂದ ಲಾಭಗಳನ್ನು ಮಾಡಿಕೊಂಡು ಅದಕ್ಕೆ ತಕ್ಕಂತೆಯೇ ರಾಜ್ಯ ಸರ್ಕಾರಕ್ಕೆ ವಾಪಸ್ಸು ಬರಬೇಕೆಂಬ ಯೋಚನೆಯನ್ನು ಇಟ್ಟುಕೊಂಡೆ ಈ ರೀತಿಯಾಗಿ ನಿಗದಿ ಮಾಡಿರುವುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಅದನ್ನು ಕೇಳುತ್ತಿಲ್ಲ, ಪ್ರೈವೇಟ್‌ನವರಿಗೆ ತಾವು 6–7 ರೂಪಾಯಿಗೆ ಕೊಡುತ್ತೀರಿ. ಈ ಸಹಕಾರ ಸಕ್ಕರೆ ಕಾರ್ಖಾನೆಯವರಿಗೆ ಬರೀ 2.84 ಪೈಸೆಗೆ ಕೊಡುತ್ತೀರಿ ಎಂದು. ಇದು ಸರಿಯಾದುದು ಅಲ್ಲವೆಂದು ನಾನು ಹೇಳುತ್ತಿರುವುದು, ನಿಮ್ಮಲ್ಲಿ ವಿದ್ಯುತ್ ಕಡಿಮೆ ಇದೆ. ನಿಮ್ಮಲ್ಲಿ ಉತ್ಪಾದನೆಯೂ ಸಹ ಕಡಿಮೆ ಇದೆ ವಿದ್ಯುತ್ ಅಭಾವವಿದೆ, ನಿಮ್ಮಲ್ಲಿ ನಾನು ಹೆಸರನ್ನು ಹೇಳುವುದಿಲ್ಲ. ಅವರ ಹೆಸರು ಹೇಳಬೇಕಾದರೆ ನಾನು ನೋಟೀಸ್ ಅನ್ನು ಕೊಡಬೇಕಾಗುತ್ತದೆ. ನಿಮ್ಮ ಮಂತ್ರಿಗಳೊಬ್ಬರು, ಮಾಜಿ ಶಾಸಕರು ಈಗ ಇದ್ದ ಮಂತ್ರಿ ಎಂದು ನಾನು ಹೆಸರು ಹೇಳುವುದಿಲ್ಲ. 5.50 ಕೋಟಿ ರೂಪಾಯಿಗಳು ಇದರಲ್ಲಿ ಅಂದಾಜು ಮಾಡಿ ನೋಟೀಸ್ ಕೊಟ್ಟಿದ್ದಾರೆ, ಪವರ್ ಕದ್ದಿದ್ದಾರೆ. ಇದರ ಬಗ್ಗೆ ತಾವು ಏನು ಮಾಡುತ್ತೀರೋ ಅದನ್ನು ನೀವೇ ಮಾಡಿ. ಇದನ್ನು ನಾನು ತಮಗೆ ಬಿಟ್ಟಿದ್ದೇನೆ. ನೀವು ಪ್ರೈವೇಟ್‌ನವರಿಗೆ.....

ಅಧ್ಯಕ್ಷರು : ತಾವು ಇಲ್ಲಿ ಬೇರೆ ಬೇರೆ ವಿಷಯ ತೆಗೆದುಕೊಂಡು ಮಾತನಾಡಿದರೆ ಹೇಗೆ ? ಈಗ ಏತಕ್ಕಾಗಿ ಆ ವಿಷಯವನ್ನು ತೆಗೆದುಕೊಂಡು ಚರ್ಚೆ ಮಾಡುತ್ತಿದ್ದೀರಿ. ಮಾನ್ಯ ಬಾಲಕೃಷ್ಣರವರೆ ತಾವು ಪಶುಸಂಗೋಪನಾ ಸಚಿವರಿಗೆ ಪ್ರಶ್ನೆಯನ್ನು ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇಲ್ಲಿ ಉಪಪ್ರಶ್ನೆಗೆ ಉತ್ತರವನ್ನು ಕೊಡಬೇಕಲ್ಲವೆ ?

ಅಧ್ಯಕ್ಷರು : ಇದು ಉಪಪ್ರಶ್ನೆಗೆ ಸಂಬಂಧವಿಲ್ಲ.

ಪಶು ಚಿಕಿತ್ಸಾಲಯಗಳಲ್ಲಿ ಸಿಬ್ಬಂದಿ ಹಾಗೂ ಕಟ್ಟಡಗಳ ಕೊರತೆ

31(43) **ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)** :– ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಾಗಡಿ ಹಾಗು ರಾಮನಗರ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾಲಯಗಳಲ್ಲಿರುವ ಸಿಬ್ಬಂದಿ ಹಾಗೂ ಕಟ್ಟಡ ಕೊರತೆ ಇರುವುದು ನಿಜವೇ ;

(ಆ) ಈ ಕೊರತೆಯ ಬಗ್ಗೆ ಎಷ್ಟು ದಿನಗಳಲ್ಲಿ ಪರಿಹಾರ ಒದಗಿಸಲಾಗುವುದು ?

ಶ್ರೀ ರೇವೂ ನಾಯಕ್ ಬೆಳಮಗಿ (ಮಾನ್ಯ ಪಶುಸಂಗೋಪನ ಸಚಿವರು) :

(ಅ) ಹೌದು ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಸಿಬ್ಬಂದಿ

ಮಾಗಡಿ ತಾಲ್ಲೂಕಿನಲ್ಲಿ ಒಟ್ಟಾರೆ 24 ಪಶುವೈದ್ಯ ಸಂಸ್ಥೆಗಳೂ ಮಂಜೂರಾತಿ ಕಾರ್ಯನಿರ್ವಹಿಸಿದ್ದು, ಇವುಗಳಿಗೆ 100 ಹುದ್ದೆಗಳು ಮಂಜೂರಾಗಿವೆ. ಇವುಗಳಲ್ಲಿ 62 ಹುದ್ದೆಗಳು ಭರ್ತಿಯಾಗಿದ್ದು, 38 ಹುದ್ದೆಗಳು ಖಾಲಿ ಇದೆ. ಹುದ್ದೆಗಳ ವೃಂದವಾರು ವಿವರ ಈ ಕೆಳಕಂಡಂತಿದೆ :–

ಕ್ರಮ ಸಂಖ್ಯೆ	ಹುದ್ದೆ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
1)	ಸಹಾಯಕ ನಿರ್ದೇಶಕರು	02	02	00
2)	ಪಶು ವೈದ್ಯಾಧಿಕಾರಿ	17	13	04
3)	ಪಶು ವೈದ್ಯಕೀಯ ಮೇಲ್ವಿಚಾರಕರು	02	02	00
4)	ಹಿರಿಯ ಪಶು ವೈದ್ಯಕೀಯ ಪರೀಕ್ಷಕರು	15	13	02
5)	ಪಶು ವೈದ್ಯಕೀಯ ಪರೀಕ್ಷಕರು	09	08	01